ಇ) ಭೂರಹಿತರು ೬೬೭೮
ಹರಿಜನ ಗಿರಿಜನರು ೨೮೯೯
ಉಳಿದ ವರ್ಗ ೫೧೦೯

ಈ) ಬಗರ್ ಹುಕುಂ ಸಾಗುವಳಿಗಾರರು ೧೧೮, ಜನರು ವಿಸ್ತೀರ್ಣ-೬೩ ಎಕರೆ ೧೦ ಗುಂಟೆ

ಉ) ತಾರೀಖು ೧-೯-೭೭ ಮತ್ತು ೨೭-೩-೮೧ರ ಸರ್ಕಾರಿ ಆಜ್ಞೆ ಪ್ರಕಾರ ಅರ್ಹ ವ್ಯಕ್ತಿಗಳಿಗೆ ಬಗರ್ ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ವರದಿಯನ್ನೊಪ್ಪಿಸುವುದು

ಶ್ರೀ ವೀರಣ್ಣ (ಉಪಾಧ್ಯಕ್ಷರು).—ಖಾಸಗಿ ಸದಸ್ಯರ ವಿಧೇಯಕಗಳ ಹಾಗೂ ನಿರ್ಣಯಗಳ ಸಮಿತಿಯ ಮೊದಲನೆಯ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ವರದಿಯನ್ನು ಮಂಡಿಸಲಾಯಿತು.

ನಿಯಮ ೩೩ಳಿರ ಮೇರೆಗೆ

ಬೆಂಗಳೂರು ಡೈರಿ ಹಾಲು ಕೆಟ್ಟುಹೋಗಿ ಉಂಟಾದ ನಷ್ಟದ ಬಗ್ಗೆ

ಶ್ರೀ ಯಡಿಯೂರಪ್ಪ.—ಅಧ್ಯಕ್ಷರೆ, ನಾನು ೩೩ಳಿರ ಕೆಳಗೆ ಒಂದು ನೋಟಿಸ್ ಕಳುಹಿಸಿದ್ದೆ. ಮಾನ್ಯ ಮಂತ್ರಿಗಳು ಅದರ ಬಗ್ಗೆ ಈಗ ಉತ್ತರ ಕೊಡಬೇಕು.

ಶ್ರೀ ವಿಶ್ವನಾಥರೆಡ್ಡಿ (ಪಶುಸಂಗೋಪನಾ ಮಂತ್ರಿಗಳು) ಅಧ್ಯಕ್ಷರೆ, ಈಗ ನಾನು ಉತ್ತರ ಹೇಳುತ್ತೇನೆ.

ದಿನಾಂಕ ೧೯-೧-೧೯೮೪ಳಿರ ಶಾಸಕ ಶ್ರೀ ಯಡಿಯೂರಪ್ಪ ಅವರ ಗಮನ ಸೆಳೆಯುವ ಸೂಚನೆಗೆ ಉತ್ತರ.

ಕಳೆದ ರಾತ್ರಿ (೧೮-೧ ೧೯೮೪ಳಿ) ಬೆಂಗಳೂರು ಡೈರಿಯಲ್ಲಿ ೧.೫ ಲಕ್ಷ ಲೀಟರ್‌ಗಳಷ್ಟು ಹಾಲು ಕೆಟ್ಟು ಹೋಗಿ, ಚರಂಡಿಗೆ ಹಾಕಲಾಯಿತು ಹಾಗೂ ಇದರಿಂದ ೪ಲಕ್ಷ ರೂಪಾಯಿಗಳಷ್ಟು ನಷ್ಟ ವಾಗಿದೆ ಎಂಬುದು ಸತ್ಯಾಂಶ ವಿಚಾರವೆ?

ಶ್ರೀ ವಿಶ್ವನಾಥ ರೆಡ್ಡಿ.—ಎಂದಿನಂತೆ ದಿನಾಂಕ ೧೮-೧-೧೯೮೪ಳಿರ ಬೆಳಿಗ್ಗೆ ಮತ್ತು ಸಂಜೆ ಹಾಲು ಸರಬರಾಜು ಮಾಡಲು ಬೆಂಗಳೂರು ಡೈರಿ ಆಡಳಿತವು ಯೋಜಿಸಿತ್ತು. ಆಂತೆಯೇ, ಬೆಳಿಗ್ಗೆಯ ಬೇಡಿಕೆ ಯಾದ ೧.೫೦ ಲಕ್ಷ ಲೀಟರ್ ಹಾಲನ್ನು ಸ್ಯಾಚೇಟ್ (ಪ್ಲಾಸ್ಟಿಕ್ ಚೀಲ)ಗಳಲ್ಲಿ ತುಂಬಿ ವಿತರಣೆಗಾಗಿ ದಿನಾಂಕ ೧೭.೧.೮೪ ರಂದು ರಾತ್ರಿ ಸಿದ್ಧ ಮಾಡಲಾಯಿತು. ಆದರೂ ದಿನಾಂಕ ೧೮.೧.೮೪ರಂದು ಬೆಳಿಗಿನ ಜಾವ ೨ ಗಂಟೆಯಲ್ಲಿ ಸುಮಾರು ೨೦೦ ಜನರು ಡೈರಿಯ ಗೇಟಿನ ಬಳಿ ಸೇರಿ ಬಂದು, ಹಾಲು ರವಾನೆ ಯನ್ನು ತಡೆಯಲು ಆರಂಭ ಮಾಡಿದರು. ಆದುದ್ದರಿಂದ, ಡೈರಿ ತಾಣದಿಂದ ಹೊರಗೆ ವಾತಾವರಣವು ಹದಗೆಟ್ಟಿರುವ ಕಾರಣ, ಲಾರಿಗಳನ್ನು ರವಾನೆ ಮಾಡುವುದು ಸಾಧುವಾಗಿರಲಿಲ್ಲ, ಲಾರಿಗಳನ್ನು ನಡೆಸುವ ಕಂಟ್ರಾಕ್ಟರ್‌ಗಳು ಸಹ ಈ ಪರಿಸ್ಥಿತಿಯಲ್ಲಿ ಲಾರಿಗಳನ್ನು ಓಡಿಸಲು ನಿರಾಕರಿಸಿದರು. ಮಧ್ಯಾಹ್ನದ ಹಾಲು ಸರಬರಾಜಿಗೂ ಸಹ ಇದೇ ರೀತಿಯ ಪರಿಸ್ಥಿತಿ ಉಂಟಾಯಿತು. ಹೀಗಾಗಿ ೧೮.೧.೧೯೮೪ಳಿ ರಂದು ಬೆಳಿಗ್ಗೆ ಮತ್ತು ಸಾಯಂಕಾಲ ಎರಡೂ ವೇಳೆಯಲ್ಲಿ ನಗರದಲ್ಲಿ ಹಾಲನ್ನು ಸರಬರಾಜು ಮಾಡಲು ಆಗಲಿಲ್ಲ.

ಹಾಲಿರುವ ಸ್ಯಾಚೇಟುಗಳನ್ನು ಆರಂಭದಲ್ಲಿ ಶಿಥಿಲ ಉಗ್ರಾಣ (ಕೋಲ್ಡ್ ಸ್ಟೋರ್ಸ್)ನಲ್ಲಿ ಇಡಲಾಗಿತ್ತು. ಮತ್ತು ದಿನಾಂಕ ೧೮.೧.೮೪ಳಿರಂದು ಡೈರಿ ತಾಣದಲ್ಲಿ ಅಂದಾಜು ೨೦,೦೦೦ ಲೀಟರ್ ಗಳಷ್ಟು ಹಾಲನ್ನು ಗ್ರಾಹಕರಿಗೆ ವಿತರಣೆ ಮಾಡಲಾಯಿತು. ಇನ್ನುಳಿದ ಸ್ಯಾಚೇಟ್‌ಗಳನ್ನು ಹೊಡೆದು, ಹಾಲನ್ನು ಪುನರ್‌ಸಂಸ್ಕರಿಸಲಾಯಿತು. ಈ ರೀತಿಯಾಗಿ ಪುನಃ ಸಂಸ್ಕರಿಸಿದ ಹಾಲಿನಲ್ಲಿ

೧೦೦,೦೦೦ ಲೀಟರ್ ಹಾಲನ್ನು ದಿನಾಂಕ ೧೯.೧.೮೪ ರಂದು ಗ್ರಾಹಕರಲ್ಲಿ ವಿತರಣೆ ಮಾಡಲಾಯಿತು. ೩೦,೦೦೦ ಲೀಟರ್‌ಗಳಷ್ಟು ಹಾಲು ಹುಳಿಯಾಗುತ್ತಾ ಬಂದಿದ್ದು ಅದನ್ನು ದ್ರವ ಹಾಲಿನ ರೂಪದಲ್ಲಿ ಮಾರಲಿಲ್ಲ. ಆದರೆ ಈ ಹಾಲನ್ನು ಬೆಣ್ಣೆ ಮತ್ತು ಕೇಸಿನ್‌ಗಳಂತೆ ಹಾಲಿನ ಉತ್ಪನ್ನಗಳನ್ನಾಗಿ ಪರಿವರ್ತಿಸಲು ಪ್ರತ್ಯೇಕವಾಗಿ ಇಡಲಾಯಿತು. ಯಾವ ಹಾಲನ್ನು ಚರಂಡಿಗೆ ಹಾಕಲಿಲ್ಲ.

ಆದರೂ, ಬೆಂಗಳೂರು ನಗರದ ನಾಗರೀಕರಿಗೆ ಹಾಲನ್ನು ಸರಬರಾಜು ಮಾಡುವಲ್ಲಿ ತಡೆಯುಂಟಾದದ್ದು ನಿಜಕ್ಕೂ ದುರದೃಷ್ಟಕರವಾದದ್ದು ಹಾಲನ್ನೇ ಅವಲಂಬಿಸಿರುವ ಮಕ್ಕಳು, ವೃದ್ದರೂ ಮತ್ತು ಖಾಯಿಲೆ ಮನುಷ್ಯರಿಗೆ ಇದು ಬವಣೆಯನ್ನುಂಟು ಮಾಡಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಏನು ಉತ್ತರವನ್ನು ಇಲ್ಲಿ ಕೊಟ್ಟಿದ್ದಾರೆ, ಇದು ಸರಿಯಲ್ಲ. ಈ ರೀತಿ ನಾನು ಹೇಳುತ್ತಿರುವ ಕಾರಣ ಇದಕ್ಕೆ ಸಂಬಂಧ ಪಟ್ಟಂತೆ ನನ್ನ ಹತ್ತಿರ ಸಾಕಷ್ಟು ಆಧಾರಗಳಿವೆ.

೧೨-೦೦ ಘಂಟೆ

ಅಧ್ಯಕ್ಷರು.—ಇದರ ಬಗ್ಗೆ ತಾವು ಚರ್ಚೆ ಮಾಡುವುದಕ್ಕೆ ಅವಕಾಶವೇ ಇಲ್ಲ. ತಮ್ಮ ಹತ್ತಿರ ಏನಾದರೂ ಆಧಾರಗಳು ಇದ್ದರೆ ದಯವಿಟ್ಟು ಮಾನ್ಯ ಸಚಿವರ ಕಡೆ ಕಳುಹಿಸಿಕೊಡಿ. ನಾವು ಇಲ್ಲಿ ಹಿಳಿನೇ ವಿಧಿ ನಿಯಮದ ವ್ಯಾಪ್ತಿಯನ್ನು ಮೀರಿ ಮುಂದೆ ಹೋಗುವುದಕ್ಕಾಗುವುದಿಲ್ಲ. ಇದರಲ್ಲಿ ಚರ್ಚೆಗೆ ಅವಕಾಶವೇ ಇಲ್ಲ. ಸಚಿವರ ಉತ್ತರವನ್ನು ಕೇಳಿಕೊಂಡು ತಾವು ಸುಮ್ಮನಾಗಬೇಕು ಅಷ್ಟೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಹಾಗಾದರೆ ಇದನ್ನು ಇನ್ನೊಂದು ದಿವಸ ತೆಗೆದು ಕೊಳ್ಳೋಣ. ಮಾನ್ಯ ಸಚಿವರು ಕೊಟ್ಟಿರತಕ್ಕ ಉತ್ತರ ಸರಿಯಾಗಿಲ್ಲ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ನನ್ನ ಉತ್ತರದಿಂದ ಸಮಾಧಾನ ಸಿಕ್ಕಿಲ್ಲ ಎಂದು ಹೇಳುವುದಾದರೆ ಇದಕ್ಕೆ ಸಂಬಂಧಪಟ್ಟಂತೆ ನಾನು ಇನ್ನೂ ಸ್ವಲ್ಪ ಮಾಹಿತಿಯನ್ನು ಕೊಡುತ್ತೇನೆ.

ಮಾನ್ಯ ಸದಸ್ಯರು ಹೇಳಿರುವಂತೆ ನಾವು ೧.೫ ಲಕ್ಷ ಲೀಟರ್ ಹಾಲನ್ನು ಚರಂಡಿಗೆ ಹಾಕಿಲ್ಲ. ಅವತ್ತಿನ ನಮ್ಮ ಡೈರಿಗೆ ಎಷ್ಟು ನಷ್ಟವಾಗಿದೆ ಎಂದರೆ ಎಲ್ಲಾ ಸೇರಿ ಒಟ್ಟು ೯೭,೫೦ ರೂ.ಗಳ ಹಾಲನ್ನು ಪ್ಯಾಕ್ ಮಾಡಲು ೧೦೦೦ ಕೆ.ಜಿ. ಪ್ಯಾಕಿಂಗ್ ಫಿಲಂಗೆ ೨೬ ಸಾವಿರ ರೂ. ಖರ್ಚಾಗಿದೆ ಇದರಲ್ಲಿ ೬ ಸಾವಿರ ರೂ. ಸ್ಯಾಚೆಟ್‌ನಿಂದ ವಾಪಸು ಬಂದಿದ್ದು ೨೦ ಸಾವಿರ ರೂ. ನಷ್ಟವಾಗಿದೆ. ಅವತ್ತಿನ ಡೈರಿಯ ಜನಶಕ್ತಿ ಅಂದರೆ ಅಲ್ಲಿ ಕೆಲಸ ಮಾಡಿದ ಜನರಿಗೆ ಕೊಟ್ಟ ಸಂಬಳ ೧೬,೬೦೦ ರೂಪಾಯಿಗಳು. ಇದು ಅವತ್ತು ನಷ್ಟವಾಗಿರತಕ್ಕದ್ದು. ಇನ್ನು ಹರಕು ಚೀಲದಲ್ಲಿ ಆದಂಥ ನಷ್ಟ ಎಂದರೆ ೭,೫೦೦ ರೂ.ಗಳು. ಬೆಣ್ಣೆ ಕೇಸಿನ್‌ಗೆ ೩೦ ಸಾವಿರ ಲೀಟರ್‌ಗೆ ಸ್ವಲ್ಪ ಹಣ ಖರ್ಚಾಗಿದೆ ನೀರು, ವಿದ್ಯುತ್, ಇನ್ನೂ ಮುಂತಾದವುಗಳಿಗೆ ಆದಂಥ ವೆಚ್ಚ ಆ ಒಂದು ದಿವಸಕ್ಕೆ ೩,೨೦೦ ರೂಪಾಯಿಗಳು ಎಂದು ಅಂದಾಜು ಮಾಡಲಾಗಿದೆ. ಒಟ್ಟು ನಮಗೆ ಆ ದಿವಸ ೯೭,೫೦೦ ರೂ. ನಷ್ಟವಾಗಿದೆ. ಇದಕ್ಕಿಂತ ಹೆಚ್ಚು ಆಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಮುಖವಾದ ವಿಚಾರ. ಆದ್ದರಿಂದ ಇದನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ತಾವು ನನ್ನ ಜೊತೆಯಲ್ಲಿ ಬಂದರೆ ಡೈರಿಗೇ ಕರೆದುಕೊಂಡು ಹೋಗಿ ಅಲ್ಲಿ ಕೆಲಸ ಮಾಡತಕ್ಕ ಜನರಿಂದಲೇ ನಾನು ಹೇಳಿಸುತ್ತೇನೆ. ಅವತ್ತಿನ ದಿವಸ ಆ ಡೈರಿಯಲ್ಲಿ ೧.೫ ಲಕ್ಷ ಲೀಟರ್ ಹಾಲು ಚರಂಡಿ ಪಾಲಾಗಿದೆಯಂತೆ...

ಅಧ್ಯಕ್ಷರು.—ತಾವು ಈ ರೀತಿ ಭಾಷಣವನ್ನೇ ಮಾಡುತ್ತಾ ಹೋಗುವುದಾದರೆ ಇನ್ನುಮುಂದೆ ನಿಯಮ ೫೫ರ ಕೆಳಗೆ ಯಾವ ವಿಷಯವನ್ನೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಸ್ವಾಮಿ, ೧.೫ ಲಕ್ಷ ಲೀಟರ್ ಹಾಲು ಆ ದಿವಸ ವಿತರಣೆ ಆಗದೆ ಡೈರಿಗೆ ನಷ್ಟವಾಗಿರುವುದರಿಂದ ನಾನು ಹೇಳುತ್ತಿದ್ದೇನೆ. ಇದು ಬೆಂಗಳೂರು ಬಂದ್‌ನಿಂದ ಆಗಿರತಕ್ಕ ನಷ್ಟವಲ್ಲ. ಅಲ್ಲಿರತಕ್ಕ ನಿಮ್ಮ ಡೈರಿಯ ಅಧಿಕಾರಿಗಳ ನಿರ್ಲಕ್ಷ್ಯತನದಿಂದ, ಕರ್ತವ್ಯ ಲೋಪದಿಂದ ಆಗಿರತಕ್ಕ ನಷ್ಟ ಇದು. ಹಿಂದಿನ ಸರ್ಕಾರ ಇದ್ದಾಗಲೂ ಹಲವಾರು ಸಾರಿ ಬೆಂಗಳೂರು ಬಂದ್ ಆಗಿರುವುದುಂಟು. ಆಗ ಏನು ಮಾಡುತ್ತಿದ್ದರು ಎಂದರೆ, ನಾಳೆ ಬೆಂಗಳೂರು ಬಂದ್ ಎಂದು

ತಿಳಿದು ಬಂದ ಕೂಡಲೇ ಅವತ್ತಿನ ಹಿಂದಿನ ರಾತ್ರಿಯೇ ಹಾಲಿನ ಸರಬರಾಜನ್ನು ಮಾಡುತ್ತಿದ್ದರು. ಅದೇರೀತಿ ನೀವು ಕೂಡ ಏತಕ್ಕೆ ಹಿಂದಿನ ದಿವಸವೇ ಸರಬರಾಜು ಮಾಡಬಾರದಿತ್ತು ? ತಾವು ನನಗೆ ಅವಕಾಶವನ್ನು ಮಾಡಿಕೊಟ್ಟರೆ ಇದನ್ನು ಸಾಬೀತು ಮಾಡಿ ತೋರಿಸುತ್ತೇನೆ. ಇಲ್ಲದೇ ಹೋದರೆ ನನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡುತ್ತೇನೆ.

ಮನವಿಗಳು

(i) ಮಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಮುಷ್ಕರದ ಬಗ್ಗೆ

ಶ್ರೀ ಧನಂಜಯ ಕುಮಾರ್ (ಮಂಗಳೂರು).—ಮಾನ್ಯ ಅಧ್ಯಕ್ಷರೆ, ಮಂಗಳೂರು ವಿಶ್ವವಿದ್ಯಾಲಯದ ಸುಮಾರು ೩೦೦ ಜನ ಸ್ನಾತಕೋತ್ತರ ವಿದ್ಯಾರ್ಥಿಗಳು ಮುಷ್ಕರ ನಡೆಸುತ್ತಿರುವ ವಿಚಾರ ಬಹಳ ಗಂಭೀರವಾದುದು. ಕಳೆದ ಒಂದು ತಿಂಗಳಿಂದ ಅವರು ಮುಷ್ಕರ ಮಾಡುತ್ತಿದ್ದಾರೆ. ಅವರು ತಮ್ಮ ತರಗತಿಗಳನ್ನು ಸಂಪೂರ್ಣವಾಗಿ ಬಹಿಷ್ಕರಿಸಿದ್ದಾರೆ. ಆವರ ೨೦ ಬೇಡಿಕೆಗಳಲ್ಲಿ ಅತಿ ಪ್ರಮುಖವಾದುದು ಎಂದರೆ ಆ ವಿಶ್ವವಿದ್ಯಾನಿಲಯದ ಉಪಕುಲಪತಿಗಳನ್ನು ಬದಲಾವಣೆ ಮಾಡ ಬೇಕೆಂದು ಒತ್ತಾಯ ಮಾಡುತ್ತಿರುವುದು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಈಗ ಹಾಲಿ ಇರತಕ್ಕ ಉಪಕುಲಪತಿಗಳ ಅವಧಿ ಮುಗಿದಿದ್ದರೂ ಕೂಡ ಮತ್ತೆ ಅವರನ್ನೇ ಮುಂದು ವರಿಸುತ್ತಿದ್ದಾರೆ. ಮತ್ತು ಈ ಉಪಕುಲಪತಿಗಳು ವಿದ್ಯಾರ್ಥಿಗಳ ಬೇಡಿಕೆಗಳನ್ನು ಈಡೇರಿಸುವುದರಲ್ಲಿ ವಿಫಲರಾಗಿದ್ದಾರೆ ಎಂಬುದು. ಇದು ಬಹುಶಃ ತಮಗೂ ಗೊತ್ತಿರಬಹುದು. ಈ ವಿಶ್ವವಿದ್ಯಾ ನಿಲಯ ಇರುವುದು ಕೊಣಾಜೆ ಎಂಬಲ್ಲಿ. ಇದು ಇರುವುದು ಮಂಗಳೂರು ನಗರದಿಂದ ಸುಮಾರು ೧೫ ಮೈಲಿ ದೂರದಲ್ಲಿ. ಅಲ್ಲಿನ ವಿದ್ಯಾರ್ಥಿಗಳು ತಮ್ಮ ಬೇಡಿಕೆಗಳನ್ನು ಈಡೇರಿಸಬೇಕೆಂದು ಏನು ಕಳೆದ ಒಂದು ತಿಂಗಳಿಂದ ಮುಷ್ಕರ ಹೂಡಿದ್ದಾರೆ. ಅದು ಇಡೀ ಜಿಲ್ಲೆಯಲ್ಲೇ ಹರಡುವ ಸಂಭವ ಇದೆ. ಇಡೀ ಜಿಲ್ಲೆಯಲ್ಲಿರತಕ್ಕ ಎಲ್ಲಾ ಕಾಲೇಜಿನವರೂ ಕೂಡ ಮುಷ್ಕರ ಹೂಡುವ ವಿಚಾರ ಮಾಡಿದ್ದಾರೆ. ಮೊನ್ನೆ ೧೬ನೇ ತಾರೀಖು ಒಂದು ಸಾರಿ ಮುಷ್ಕರ ಮಾಡಿದ್ದಾರೆ. ಈಗ ಮತ್ತೆ ೨೩ ನೇ ತಾರೀಖಿನಿಂದ ಅನಿರ್ದಿಷ್ಟ ಕಾಲದವರೆಗೆ ಮುಷ್ಕರ ಹೂಡುವುದಾಗಿ ತಿಳಿದುಬಂದಿದೆ. ಆದರೆ ಸಿಂಡಿಕೇಟ್ ಸದಸ್ಯರು ಮತ್ತು ಉಪಕುಲಪತಿಗಳು ಏನು ಹೇಳುತ್ತಿದ್ದಾರೆಂದರೆ ಇಲ್ಲಿ ಯಾವ ತೊಂದರೆಯೂ ಇಲ್ಲ, ಎಲ್ಲವೂ ಸಂಗಮವಾಗಿ ನಡೆದುಕೊಂಡು ಹೋಗುತ್ತಿದೆ, ಯಾವುದೇ ರೀತಿ ಯಲ್ಲೂ ಯಾರಿಗೂ ತೊಂದರೆಯಾಗಿಲ್ಲ ಎಂದು ಪತ್ರಿಕೆಗಳ ಮೂಲಕ ಹೇಳಿಕೆ ಕೊಡುತ್ತಿದ್ದಾರೆ...

ಅಧ್ಯಕ್ಷರು.—ತಾವು ಭಾಷಣ ಮಾಡುವುದು ಬೇಡ.

ಶ್ರೀ ವಿ. ಧನಂಜಯ ಕುಮಾರ್.—ಈ ಉಪಕುಲಪತಿಗಳು ತಮ್ಮ ಆಫೀಸಿನಲ್ಲೇ ಗಟ್ಟಿಯಾಗಿ ಕೂತಿದ್ದಾರೆ. ಅಲ್ಲಿ ವಿದ್ಯಾರ್ಥಿಗಳ ಗತಿ ಏನು ಎಂಬುದನ್ನು ಹೋಗಿ ನೋಡಿಕೊಂಡು ಬಂದಿಲ್ಲ. ಆ ಸ್ಥಳಕ್ಕೆ ಈ ಉಪಕುಲಪತಿಗಳು ಕಳೆದ ೨ ತಿಂಗಳಿಂದಲೂ ಹೋಗಿಯೇ ಇಲ್ಲ. ನಾವು ೪-೫ ಜನ ಶಾಸಕರು ಆ ಮುಷ್ಕರ ಹೂಡಿರತಕ್ಕ ವಿದ್ಯಾರ್ಥಿಗಳ ಹತ್ತಿರ ಹೋಗಿ ಅವರೊಡನೆ ಮಾತನಾಡಿ ಕೊಂಡು ವಿಚಾರ ಏನೆಂಬುದನ್ನು ಕೇಳಿ ತಿಳಿದುಕೊಂಡು ಬಂದಿದ್ದೇವೆ.

ಅಧ್ಯಕ್ಷರು.—ತಮಗೆ ಎಷ್ಟು ಹೇಳಿದರೂ ಭಾಷಣವನ್ನೇ ಮಾಡಲು ಹೋಗುತ್ತಿದ್ದೀರಿ. ಇದು ಸರಿಯಲ್ಲ.

ಶ್ರೀ ಜಿ. ನಾರಾಯಣ ಕುಮಾರ್.—ಸ್ವಾಮಿ ಕಳೆದ ೨ ತಿಂಗಳಿಂದ ಆ ಉಪಕುಲಪತಿಗಳು ಅಲ್ಲಿಗೆ ಹೋಗಿಯೇ ಇಲ್ಲವೆಂದು ಹೇಳುವುದಾದರೆ ಇದಕ್ಕೆ ನಾವು ಏನು ಹೇಳಬೇಕು ?

ಅಧ್ಯಕ್ಷರು.—ಹಿಂಸೆಯ ವ್ಯಾಪ್ತಿ ಏನು ಎಂಬುದನ್ನು ಮತ್ತೆ ಮತ್ತೆ ಹೇಳುತ್ತಲೇ ಇದ್ದೇನೆ. ಸದಸ್ಯರಿಗೆ ಆದಷ್ಟು ಅನುಕೂಲ ಮಾಡಿಕೊಡಬೇಕೆಂಬ ದೃಷ್ಟಿಯಿಂದ ಪ್ರತಿದಿನ ೧೨-೧೪ ಪ್ರಶ್ನೆಗಳಿಗೆ ಸರ್ಕಾರದವರು ಉತ್ತರಗಳನ್ನು ಒದಗಿಸಿಕೊಡುತ್ತಿದ್ದಾರೆ. ತಾವು ಇದನ್ನು ಅರ್ಥಮಾಡಿಕೊಳ್ಳ ಬೇಕು.

ಶ್ರೀ ಧನಂಜಯ ಕುಮಾರ್.—ಸ್ವಾಮಿ, ಸರ್ಕಾರದ ಪರವಾಗಿ ಆಗಿರತಕ್ಕ ಲೋಪವನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ವಿದ್ಯಾರ್ಥಿಗಳ ಮುಖ್ಯ ಬೇಡಿಕೆ ಏನೆಂದರೆ ಈ ವಿಶ್ವ